O.S.36/2017

PW : 3

ದಿನಾಂಕ 07-02-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಸ್ ಎಸ್ ಕೆ ವಕೀಲರಿಂದಃ

ನಾನು 1 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದೇನೆ. ಸರ್ವೆ ನಂ.1/3 ನನಗೆ ಸೇರಿದ ಜಮೀನು. ನಮ್ಮ ಆಸ್ತಿಯ ಉತ್ತರಕ್ಕೆ ದಾವಾಸ್ತಿ ಇದೆ. ಪೆಟ್ರೋಲ್ ಬಂಕ್ ಉತ್ತರದ ದಿಕ್ಕಿನಲ್ಲಿದೆ. ನಮ್ಮ ಜಮೀನಿನ ಉತ್ತರದ ದಿಕ್ಕಿನಲ್ಲಿರುವ ಜಮೀನನ್ನು 1 ರಿಂದ 3 ನೇ ಪ್ರತಿವಾದಿಗಳು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಭೀಮಣ್ಣ ಸಾಗುವಳಿ ಮಾಡುತ್ತಿದ್ದಾರೆ ಎನ್ನುತ್ತಾರೆ. ಸರ್ವೆ ನಂ.2/1 ರಲ್ಲಿ ವಾದಿಗಳು ಎಂದೂ ಸಾಗುವಳಿ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿಗಳು ದಾವಾಸ್ತಿಯ ಸಾಗುವಳಿದಾರರಲ್ಲ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

(ಶ್ರೀ ಕೆ ಎನ್ ಡಿ ವಕೀಲರು ಸದರಿ ಪಾಟೀ ಸವಾಲನ್ನು ಅಡಾಪ್ ಮಾಡಿಕೊಂಡಿರುತ್ತಾರೆ).

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೆ ಸರಿ ಇದೆ.

ಸಹಿ

ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.